(೧) ಯುವಜನ ಸೇವೆ ಮತ್ತು ಕ್ರೀಡಾ ಇಲಾಖೆಯ ಮಾನ್ಯ ಮಂತ್ರಿಗಳು ... ಅಧ್ಯಕ್ಷರು

(೨) ಯುವಜನ ಸೇವೆ ಮತ್ತು ಕ್ರೀಡಾ ಇಲಾಖೆಯ ನಿರ್ದೇಶಕರು ... ಕಾರ್ಯದರ್ಶಿಗಳು

(೩) ಕಾರ್ಯನಿರ್ವಾಹಕ ಅಭಿಯಂತರು ಕಟ್ಟಡ ವಿಭಾಗ, ನಂ. ೨, ಲೋಕೋಪಯೋಗಿ ಇಲಾಖೆ ... ಸದಸ್ಯರು

(೪) ಯುವಜನ ಸೇವೆ ಮತ್ತು ಕ್ರೀಡಾ ಇಲಾಖೆಯ ಉಪ ನಿರ್ದೇಶಕರು (ಆಡಳಿತ) ..

(೫) ಮೆಸರ್ಸ್ ಐತಾಳ್, ಅಸೋಸಿಯೇಟ್ ಆರ್ಕಿಟೆಕ್ಟ್ಸ್ ... ,,

ಸಂಬಂಧಪಟ್ಟ ಕಂಟ್ರಾಕ್ಟರ್‌ಗಳನ್ನು ಆಹ್ವಾನಿತರನ್ನಾಗಿ ವೀಟಿಂಗ್‌ಗಳಿಗೆ (ಸಭೆಗಳಿಗೆ) ಆಹ್ವಾನಿಸಲಾಗುವುದು.

(೪) ೫೮.೦೦ ಲಕ್ಷ ರೂಪಾಯಿಗಳು. ಅಂದಾಜು ವೆಚ್ಚ.

ಗ್ರೂಪ್ 'ಎ' ಶೀಘ್ರಲಿಪಿಗಾರರಿಗೆ ಬಡ್ತಿ ನೀಡುವ ಬಗ್ಗೆ ಅವಕಾಶ ಪ್ರಮಾಣ ಇಲ್ಲದಿರುವಿಕೆ

೭೧೮. ಶ್ರೀ ಬಾಬುರೆಡ್ಡಿ ತುಂಗಳ (ಬೀಳಗಿ).—ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

(ಅ) ಸರ್ಕಾರದ ಸಚಿವಾಲಯದಲ್ಲಿ ಹಿರಿಯ ಸಹಾಯಕರಿಗೂ ಮತ್ತು ಶೀಘ್ರಲಿಪಿಗಾರರಿಗೂ ಬಡ್ತಿ ನೀಡುವ ಬಗ್ಗೆ ದರ್ಜಿ ಹಾಗೂ ನೇಮಕಾತಿ ನಿಯಮಾವಳಿಯಲ್ಲಿ ಇರುವ ಪ್ರಮಾಣವೆಷ್ಟು, ಮತ್ತು ಅಂತಹ ಪ್ರಮಾಣವನ್ನು ಯಾವ ಆಧಾರದ ಮೇಲೆ ಮಾಡಲ್ಪಟ್ಟಿದೆ. ಆದರಿಂದ ಶೇಕಡಾವಾರು ಎಷ್ಟು ಶೀಘ್ರಲಿಪಿಗಾರರು ಬಡ್ತಿಯನ್ನು ಪಡೆದಿರುತ್ತಾರೆ.

(ಆ) ಇದೇ ಪ್ರಕಾರ ಮೊದಲನೆ ದರ್ಜೆ ಗುಮಾಸ್ತರಿಗೂ ಶೀಘ್ರಲಿಪಿಗಾರರಿಗೂ ಬಡ್ತಿ ನೀಡುವ ಬಗ್ಗೆ ಇಲಾಖಾ ಮುಖ್ಯಸ್ಥರ ಕಚೇರಿಗಳಲ್ಲಿ ಯಾವ ಪ್ರಮಾಣ ಅನುಸರಿಸಲಾಗಿದೆ, ಹಾಗೂ ಯಾವ ಇಲಾಖೆಯಲ್ಲಿ ಎಷ್ಟೆಷ್ಟು ಪ್ರಮಾಣದಲ್ಲಿ ಬಡ್ತಿ ನೀಡಲಾಗಿದೆ.

(ಇ) ಈ ಪ್ರಮಾಣವನ್ನು ಅಳವಡಿಸದೆ ಇದುವರೆವಿಗೂ ಒಬ್ಬರಿಗೂ ಬಡ್ತಿಯನ್ನು ನೀಡದೆ ತಡೆ ಹಿಡಿದಿರುವ ಇಲಾಖೆಗಳ ಸಂಖ್ಯೆ ಎಷ್ಟು ಮತ್ತು ಸರ್ಕಾರದ ಆದೇಶವನ್ನು ಉಲ್ಲಂಘಿಸಿರುವುದಕ್ಕೆ ಕಾರಣಗಳೇನು, ಅಂತಹ ಇಲಾಖೆಗಳ ಬಗ್ಗೆ ಸರ್ಕಾರದವರ ಆದೇಶವೇನು ?

ಶ್ರೀ ರಾವಂಕೃಷ್ಣ ಹೆಗಡೆ (ಮುಖ್ಯ ಮಂತ್ರಿಯವರು).—

(ಅ) ಸಚಿವಾಲಯದಲ್ಲಿ ಸಹಾಯಕರ ಹಾಗೂ ಶೀಘ್ರಲಿಪಿಗಾರರ ವೃಂದದಿಂದ ಹಿರಿಯ ಸಹಾಯಕರಾಗಿ ಬಡ್ತಿ ಹೊಂದಲು ಈಗಿರುವ ಪ್ರಮಾಣ ೫-೨ Ad-hoc ಆಗಿ ನಿಗದಿಪಡಿಸಿದ್ದಾಗಿದೆ. ಸೂಕ್ತವಾದ ತತ್ವ ಅಥವಾ ಆಳತೆಗೋಲನ್ನು ನಿರ್ಧರಿಸುವ ವಿಷಯದಲ್ಲಿ ಶಿಫಾರಸು ಮಾಡಲು ಒಂದು ಸಮಿತಿಯನ್ನು ರಚಿಸಲಾಗಿದೆ. ಈವರೆಗೆ ೧೯೮ ಶೀಘ್ರಲಿಪಿಗಾರರು ಹಿರಿಯ ಸಹಾಯಕರ ಹುದ್ದೆಗೆ ಬಡ್ತಿಯನ್ನು ಪಡೆದಿರುತ್ತಾರೆ. ಮತ್ತು ಇವರಲ್ಲಿ ೩೪ ಶೀಘ್ರಲಿಪಿಗಾರರು ೫:೨ ಪ್ರಮಾಣದ ಪ್ರಕಾರ ಮುಂಬಡ್ತಿಯನ್ನು ಹೊಂದಿರುತ್ತಾರೆ.

(ಆ) ಬಹುತೇಕ ಇಲಾಖೆಗಳಲ್ಲಿಯೂ ಸಹ ಶೀಘ್ರಲಿಪಿಗಾರರ ಬಡ್ತಿಗೆ ಅವಕಾಶವಿದೆ. ಈ ಇಲಾಖೆಗಳ ಹೆಸರು ಹಾಗೂ ಎಷ್ಟು ಪ್ರಮಾಣದಲ್ಲಿ ಅಥವಾ ಶೇಕಡಾವಾರು ಎಷ್ಟರಮಟ್ಟಿಗೆ ಬಡ್ತಿಗೆ ಅವಕಾಶವಿದೆ ಎಂಬುದನ್ನು ಲಗತ್ತಿಸಿರುವ ಪಟ್ಟಿಯಲ್ಲಿ ಸೂಚಿಸಲಾಗಿದೆ.

(ಇ) ೨೫ ಇಲಾಖೆಗಳಲ್ಲಿ ಶೀಘ್ರಲಿಪಿಗಾರರ ಮುಂಬಡ್ತಿಗೆ ಅವಕಾಶವಿಲ್ಲ ವೃಂದ ವಿಮರ್ಶೆ ಸಮಿತಿಗಳನ್ನು ಸಚಿವಾಲಯ ಮಟ್ಟದಲ್ಲಿ ಹಾಗೂ ಇಲಾಖಾ ಮಟ್ಟದಲ್ಲಿ ರಚಿಸಲಾಗಿದೆ. ಇಲಾಖೆಗಳಲ್ಲಿರುವ ಸ್ಥಿತಿಯನ್ನು ವಿಮರ್ಶಿಸಿ ಸೂಕ್ತ ಪರಿಹಾರ ಕ್ರಮವನ್ನು ತೆಗೆದುಕೊಳ್ಳಲಾಗುವುದು.